ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಸಂಖ್ಯೆ : ಕಾಇ/.ಲೋಇ.ಬೆಂ.ವಿ./ಎಇ-3/2020-21 | 4862

ಕಾರ್ಯಪಾಲಕ ಅಭಿಯಂತರರ ಕಛೇರಿ,
ಲೋ.ಬಂ ಮತ್ತು ಒ.ಜ.ಸಾ ಇಲಾಖೆ
ಬೆಂಗಳೂರು ವಿಭಾಗ, ಬೆಂಗಳೂರು.
ದಿನಾಂಕ: 31/12/2020

**ರವರಿಗೆ,**

**ಕಾರ್ಯದರ್ಶಿ**
ಸ್ಮೃತಿ ಅಕಾಡಮಿ,
ನಂ. 18, ಹುಸ್ಕೂರು ವಿಲ್ಲೇಜ್,
ಆನೇಕಲ್ ತಾಲ್ಲೂಕು, ಬೆಂಗಳೂರು-560099

**ಮಾನ್ಯರೇ,**

ವಿಷಯ:- ಆನೇಕಲ್ ತಾಲ್ಲೂಕು ಸ್ಮೃತಿ ಅಕಾಡಮಿ ಸರ್ವೆ ನಂ. 18 ಹುಸ್ಕೂರು ವಿಲ್ಲೇಜ್ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:- 1. ತಮ್ಮ ಮನವಿ ಪತ್ರದ ದಿನಾಂಕ:- 11.11.2020
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಆನೇಕಲ್ ಉಪವಿಭಾಗ, ಆನೇಕಲ್‌ರವರ ಪತ್ರ ಸಂಖ್ಯೆ: 2020-21/384 ದಿನಾಂಕ: 17.12.2020

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ತಮ್ಮ ಮನವಿ ಪತ್ರದಲ್ಲಿ ಆನೇಕಲ್ ತಾಲ್ಲೂಕು ಸ್ಮೃತಿ ಅಕಾಡಮಿ ಸರ್ವೆ ನಂ. 18 ಹುಸ್ಕೂರು ವಿಲ್ಲೇಜ್ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ನೀಡಲು ಕೋರಿರುತ್ತೀರಿ.

ಅದರಂತೆ, ದಿನಾಂಕ: **23.12.2020** ರಂದು **ಆನೇಕಲ್ ತಾಲ್ಲೂಕು ಸ್ಮೃತಿ ಅಕಾಡಮಿ ಸರ್ವೆ ನಂ. 18 ಹುಸ್ಕೂರು ವಿಲ್ಲೇಜ್** ಕಟ್ಟಡವನ್ನು ಕಾರ್ಯಪಾಲಕ ಅಭಿಯಂತರರು, ಲೋಇ., ಬೆಂಗಳೂರು ವಿಭಾಗ, ಬೆಂಗಳೂರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಉಪವಿಭಾಗ, ಆನೇಕಲ್ ಹಾಗೂ ಸ್ಮೃತಿ ಅಕಾಡಮಿ ಪ್ರೈವೇಟ್ ಲಿಮಿಟೆಡ್ ರವರ ಉಪಸ್ಥಿತಿಯಲ್ಲಿ ಕಟ್ಟಡ ಪರಿವೀಕ್ಷಣೆ ಕೈಗೊಳ್ಳಲಾಗಿರುತ್ತದೆ. ಸದರಿ ತಂಡದೊಂದಿಗೆ ಕಟ್ಟಡದ ಪರಿವೀಕ್ಷಣೆ ನಡೆಸಲಾಗಿ ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ.

ಕಟ್ಟಡವು ಬೇಸ್‌ಮೆಂಟ್ ನೆಲಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಯನ್ನು ಒಳಗೊಂಡಂತೆ 2020 ರಲ್ಲಿ ನಿರ್ಮಿಸಲಾಗಿರುತ್ತದೆ. ಕಟ್ಟಡದ ಬೇಸ್‌ಮೆಂಟ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆ, ಮೊದಲನೇ ಮಹಡಿಯಲ್ಲಿ ಪ್ರವೇಶ ಲಾಂಜ್, 7 Montessori, reception, staff room, 6 ಕೊಠಡಿಗಳು, ಮೊದಲನೇ ಮಹಡಿಯಲ್ಲಿ ಎರಡು ಕಛೇರಿ ಕೋಣೆಗಳು, ಸ್ಟಾಪ್ ರೂಂ, ಮೆಡಿಕಲ್ ಸಿಟ್ ರೂಂ, ಶೌಚಾಲಯಗಳು, ಎರಡು ಸ್ಟೇರ್‌ಕೇಸ್, ಲಿಫ್ಟ್ ರೂಂ, ಇವುಗಳನ್ನು ಒಳಗೊಂಡಂತೆ ಮುಂಭಾಗದಲ್ಲಿ ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳಿಗೆ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಇರುತ್ತದೆ. ಮೊದಲನೇ ಮಹಡಿಯಲ್ಲಿ ಕಂಪ್ಯೂಟರ್ ಲ್ಯಾಬ್, ಲೈಬ್ರರಿ ಸ್ಟಾಪ್ ರೂಂ, ಮೆಡಿಕಲ್ ಲ್ಯಾಬ್, ಆರ್ಟ್ ರೂ, 13 ಕೊಠಡಿಗಳಿರುತ್ತವೆ. ಎರಡನೇ ಮಹಡಿಯಲ್ಲಿ ಲೈಬ್ರರಿ, ಫಿಸಿಕ್ಸ್ ಲ್ಯಾಬ್, ಕೆಮಿಸ್ಟ್ರಿ ಲ್ಯಾಬ್, ಜಿಯೋಲಜಿ, ಜಿಯೋಗ್ರಫಿ ಲ್ಯಾಬ್, ಬಯೋಲ್ಯಾಬ್, ಮ್ಯಾತ್ಸ್ ಲ್ಯಾಬ್, 15 ಕ್ಲಾಸ್ ರೂಂ ಗಳಿರುತ್ತವೆ. ಎಲ್ಲಾ ಫ್ಲೋರ್‌ಗಳಲ್ಲು ಶೌಚಾಲಯ, ಮೆಟ್ಟಿಲು

ಮತ್ತು ಲಿಫ್ಟ್ ಇರುತ್ತದೆ. ಎಲ್ಲಾ ಮಹಡಿಗಳಲ್ಲಿ ಛಾವಣಿ ಎತ್ತರವು 3.5 ಮೀಟರ್ ಇರುವುದು ಕಂಡುಬಂದಿರುತ್ತದೆ. ಹಾಗೂ ಮೆಟ್ಟಿಲುಗಳ ಅಗಲವು 1.60 ಮೀಟರ್ ಇರುತ್ತದೆ.

ಮುಂದುವರೆದು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಉಪವಿಭಾಗ, ಆನೇಕಲ್ ರವರು ಉಲ್ಲೇಖ (2) ರ ಪತ್ರದಲ್ಲಿ ಕಟ್ಟಡವನ್ನು Re-bound hammer method ಮೂಲಕ ಪರೀಕ್ಷಿಸಿ, ಕಟ್ಟಡವು IS code-456-2000, IS code- 4926-2003, IS code-516-1959 & 8112-1989 for 43 grade ನಲ್ಲಿ ನಿಗಧಿಪಡಿಸಿರುವ ಮಾನದಂಡದಂತೆ ಕಟ್ಟಡದ ಕಾಂಕ್ರೀಟ್ ಕಂಬಗಳು (Columns), ತೊಲೆಗಳನ್ನು (Beams) ಮತ್ತು ಛಾವಣಿಯು(Slab) ವಿನ್ಯಾಸದಂತೆ ಎಂ–25 ಕಾಂಕ್ರೀಟ್‌ನ ಸಾಮರ್ಥ್ಯಕ್ಕಿಂತ ಹೆಚ್ಚು ಹೊಂದಿರುವುದಾಗಿ ಹಾಗೂ ಸದರಿ ಕಟ್ಟಡವನ್ನು ಅನುಮೋದಿಸಲ್ಪಟ್ಟ ನಕ್ಷೆ ಹಾಗೂ ಸ್ಟ್ರಕ್ಚರಲ್ ವಿನ್ಯಾಸದಂತೆ ನಿರ್ಮಿಸಲಾಗಿರುತ್ತದೆಂದು ವರದಿ ಸಲ್ಲಿಸಿರುತ್ತಾರೆ.

- ಕಟ್ಟಡದ ಮಾಲೀಕತ್ವವನ್ನು ಪರಿಶೀಲಿಸಲಾಗಿ ಕಟ್ಟಡವು **"ಸ್ಮೃತಿ ಅಕಾಡಮಿ ಪ್ರೈವೆಟ್ ಲಿಮಿಟೆಡ್"** ರವರ ಹೆಸರಿನಲ್ಲಿ ನೋಂದಾಯಿಸಲಾಗಿರುತ್ತದೆ.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುಸ್ಕೂರು ಗ್ರಾಮ ಪಂಚಾಯಿತಿಯಿಂದ ಅನುಮೋದನೆಯಾದ ನಕ್ಷೆಯಂತೆ **"ಸ್ಮೃತಿ ಅಕಾಡಮಿ ಪ್ರೈವೆಟ್ ಲಿಮಿಟೆಡ್"** ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ.
- ಸದರಿ ಕಟ್ಟಡವನ್ನು **Noothan kaliver Eera Structural Consultant ಹಾಗೂ Appanna and Nirmala Architechs** ರವರು ನೀಡಿರುವ ಸ್ಟ್ರಕ್ಚರಲ್ ವಿನ್ಯಾಸದಂತೆ ನಿರ್ಮಿಸಲಾಗಿರುತ್ತದೆ.
- **Ultrasonic Pulse Velocity Test**
  Conducting Ultrasonic pulse velocity test for compressive strength of in-situ concrete on Columns, Beams and Slab at Critical points using **"PUNDIT 6" (Portable ultrasonic non-destructive Digital indicating Tester)** equipment form **M/s. CNS FARNELL U.K,** as per the guidelines in Indian Standards **(IS: 516 (Par 5/Sec 1):2018)** ಪರೀಕ್ಷೆಯನ್ನು ವ್ಯವಸ್ಥಾಪಕ ನಿರ್ದೇಶಕರು **(Technical) M/s HENCON ASSOCIATES** ರವರ ಜೊತೆ ಉಪವಿಭಾಗದ ತಾಂತ್ರಿಕ ತಂಡದೊಂದಿಗೆ ಕೈಗೊಂಡು ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಾಗಿರುತ್ತದೆ.
- Recognizance, visual inspection fo Building-cracks, rusting of reinforcement, distress etc. ಪರೀಕ್ಷೆಯನ್ನು ವ್ಯವಸ್ಥಾಪಕ ನಿರ್ದೇಶಕರು **(Technical) M/s HENCON ASSOCIATES** ರವರ ಜೊತೆ ಉಪವಿಭಾಗದ ತಾಂತ್ರಿಕ ತಂಡದೊಂದಿಗೆ ಕೈಗೊಂಡು ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಾಗಿರುತ್ತದೆ.

ಕಟ್ಟಡವು National Building code of India 2016 ರ ಮಾನದಂಡದಂತೆ ನಿರ್ಮಿಸಿ ಸುರಕ್ಷಿತವಾಗಿರುವುದಾಗಿ **HENCON ASSOCIATES** ಬೆಂಗಳೂರು ರವರು ಧೃಢೀಕರಿಸಿ ನೀಡಿರುವ ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ **Noothan kaliver Eera Structural Consultant** ಹಾಗೂ **Appanna and Nirmala Architechs** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಪರಿಶೀಲಿಸಲಾಗಿ ಕಟ್ಟಡವು **"Stracturally Stable"** ಇದೆ ಎಂದು **ಸ್ಮೃತಿ ಅಕಾಡಮಿ ಸರ್ವೆ ನಂ. 18 ಹುಸ್ಕೂರು ವಿಲ್ಲೇಜ್** ಕಟ್ಟಡದ ಸುರಕ್ಷತೆಯ ಪ್ರಮಾಣ ಪತ್ರವನ್ನು ನೀಡಲಾಗಿದೆ.

**ತಮ್ಮ ವಿಶ್ವಾಸಿ,**

**ಕಾರ್ಯಪಾಲಕ ಅಭಿಯಂತರರು,**
**ಲೋ.ಇ., ಬೆಂಗಳೂರು ವಿಭಾಗ,**
**ಬೆಂಗಳೂರು.**